ಪೊಲೀಸ್ ಮಹಾ ನಿರ್ದೇಶಕರು ಹಾಗೂ
ಮಹಾ ನಿರ್ದೇಶಕರವರ ಕಛೇರಿ
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು
ಬೆಂಗಳೂರು-560 042
ದಿನಾಂಕ: 17 OCT 2022

ಮಹಾ ಇನ್ಸ್‌ಪೆಕ್ಟರ್ ಜನರಲ್ ...
In No: 55207
17 SEP 2022
ಬೆಂಗಳೂರು

ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಳಗಾವಿ ಜಿಲ್ಲೆ, ಬೆಳಗಾವಿ-590001

Office of the Deputy Commissioner, Belagavi District, Belagavi-590001

ದೂರವಾಣಿ-0831-2407274 FAX-2452644 Email-dco.belgavi@gmail.com

ಕ್ರ/ಕಂಶಾ/ಎಲ್‌ಜಿಎಲ್/ವಿವ-147/2015-16 ದಿನಾಂಕ: 04.08.2022

ವಿಷಯ: ಬೈಲಹೊಂಗಲ ತಾಲೂಕಿನ ಬಿದರಗಡ್ಡಿ ಗ್ರಾಮದ ರಿ.ಸ.ನಂ.9,10,12,ಮತ್ತು 13ರ ಒಟ್ಟು ಕ್ಷೇತ್ರ 64ಎಕರೆ 14ಗುಂಟೆ ಪೈಕಿ 49ಎಕರೆ 35 ಗುಂಟೆ ಜಮೀನನ್ನು ರಾಜ್ಯ ವಿಪತ್ತು ಸ್ಪಂದನಾ ಪಡೆ ಬೆಳಗಾವಿ "ಸಿ" ಕಂಪನಿಗೆ, ಜಮೀನು ಮಂಜೂರು ಮಾಡುವ ಕುರಿತು.

ಓದಿತು:
1. ಪ್ರಾದೇಶಿಕ ಆಯುಕ್ತರು, ಬೆಳಗಾವಿ ಇವರ ಪತ್ರ ಸಂ:ಪ್ರಾಆಬೆ/ಭೂಮಿ-4/ಎಲ್‌ಜಿಎಲ್/ವಿವ-03/2016-17 ದಿನಾಂಕ:29.06.20217.
2. ಪೋಲೀಸ್ ಮಹಾನಿರ್ದೇಶಕರು, ಮಹಾ ಸಮಾದೇಷ್ಟರು ಗೃಹರಕ್ಷಕ ದಳ ನಿರ್ದೇಶಕರು, ಪೌರರಕ್ಷಣೆ ಹಾಗೂ ಮಹಾನಿರ್ದೇಶಕರು. ಅಗ್ನಿಶಾಮಕ & ತುರ್ತು ಸೇವೆಗಳು ಹಾಗೂ ರಾಜ್ಯ ವಿಪತ್ತು ಸ್ಪಂದನಾ ಪಡೆ, ಬೆಂಗಳೂರು ಇವರ ಪತ್ರ ಸಂ:ಎಸ್‌ಡಿಆರ್‌ಎಫ್/04/ಡಿಜಿಪಿ/2015-16 ದಿನಾಂಕ:4.10.2021
3. ಉಪವಿಭಾಗಾಧಿಕಾರಿಗಳು ಬೈಲಹೊಂಗಲ ಇವರ ಪತ್ರ ಕ್ರ:ಎಲ್‌ಎನ್‌ಡಿ/ಸಿಆರ್-196/2015-16 ದಿನಾಂಕ:20.09.2017
4. ತಹಶೀಲ್ದಾರ ಬೈಲಹೊಂಗಲ ಇವರ ಪತ್ರ ಕ್ರ:ಎಲ್‌ಜಿಎಲ್/ಸಿಆರ್-29/2014-15 ದಿನಾಂಕ:07.11.2017.
5. ಸರ್ಕಾರದ ಪತ್ರ ಕ್ರ:ಕಂಇ 51 ಎಲ್‌ಜಿಎಲ್ 2017 ದಿನಾಂಕ:09.12.2021
6. ಸರ್ಕಾರದ ಪತ್ರ ಕ್ರ:ಕಂಇ 28 ಎಲ್‌ಜಿಎಲ್ 2017 ದಿನಾಂಕ:29.06.2022

*****

ಜಿಲ್ಲಾಧಿಕಾರಿಗಳು, ಬೆಳಗಾವಿ
Deputy Commissioner, Belagavi

<u>ಪ್ರಸ್ತಾವನೆ.</u>

ಬೈಲಹೊಂಗಲ ತಾಲೂಕಿನ ಬಿದರಗಡ್ಡಿ ಗ್ರಾಮದ ರಿ.ಸ.ನಂ. 9,10,12,ಮತ್ತು 13ರ ಕ್ಷೇತ್ರ ಒಟ್ಟು 64ಎಕರೆ 14ಗುಂಟೆ ಪೈಕಿ 49ಎಕರೆ 35 ಗುಂಟೆ ನೇದ್ದರ ಜಮೀನನ್ನು "ರಾಜ್ಯ ವಿಪತ್ತು ಸ್ಪಂದನಾ ಪಡೆ ಬೆಳಗಾವಿ "ಸಿ" ಕಂಪನಿಗೆ" ಜಮೀನು ಮಂಜೂರು ಕೋರಿ ಪೋಲೀಸ್ ಮಹಾ ನಿರ್ದೇಶಕರು, ಹಾಗೂ ಮಹಾ ನಿರ್ದೇಶಕರು, ರಾಜ್ಯ ವಿಪತ್ತು ಸ್ಪಂದನಾ ಪಡೆ ಬೆಂಗಳೂರು" ಇವರು ಓದಿತು (2) ರನ್ವಯ ಕೋರಿರುತ್ತಾರೆ.

ADGP (GHR)
BLD

ಉಪವಿಭಾಗಾಧಿಕಾರಿ ಬೈಲಹೊಂಗಲ ಹಾಗೂ ತಹಶೀಲ್ದಾರ ಕಿತ್ತೂರ ಇವರು ಸದರಿಯವರ ಕೋರಿಕೆಯನ್ವಯ, ಪ್ರಸ್ತಾಪಿತ ಗಾಯರಾಣಾ ಜಮೀನನ್ನು ಬೈಲಹೊಂಗಲ ತಾಲೂಕಿನ ಬಿದರಗಡ್ಡಿ ಗ್ರಾಮದ ರಿ.ಸ.ನಂ.9,10,12, ಮತ್ತು 13ರ ಒಟ್ಟು ಕ್ಷೇತ್ರ 64ಎಕರೆ 14ಗುಂಟೆ ಪೈಕಿ 49ಎಕರೆ 35 ಗುಂಟೆ ನೇದ್ದರ ಜಮೀನನ್ನು " ರಾಜ್ಯ ವಿಪತ್ತು ಸ್ಪಂದನಾ ಪಡೆ ಬೆಳಗಾವಿ "ಸಿ" ಕಂಪನಿಗೆ " ಪೋಲೀಸ್ ಮಹಾ ನಿರ್ದೇಶಕರು, ಹಾಗೂ ಮಹಾ ನಿರ್ದೇಶಕರು, ರಾಜ್ಯ ವಿಪತ್ತು ಸ್ಪಂದನಾ ಪಡೆ ಬೆಂಗಳೂರು ಇವರಿಗೆ ಮಂಜೂರು ಮಾಡುವ ಕುರಿತು ಓದಿತು (3) ಹಾಗೂ (4) ರಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಈ ಕಾರ್ಯಾಲಯದ ಇದೇ ಸಮ ಸಂಖ್ಯೆಯಡಿ ದಿನಾಂಕ: 08.12.2017 ರಂದು ಪ್ರಸ್ತಾಪಿತ ಜಮೀನನ್ನು "ರಾಜ್ಯ ವಿಪತ್ತು ಸ್ಪಂದನಾ ಪಡೆ ಬೆಳಗಾವಿ

DGP
P1 - pl. put up a statement of SDRF land already allotted and to be allotted.
Today
17/10
DD/SDRF

BLD TO - DGP Fire Services



Scanned with CamScanner

"ಸಿ"ಕಂಪನಿಗೆ, ಪೋಲೀಸ್ ಮಹಾ ನಿರ್ದೇಶಕರು, ಹಾಗೂ ಮಹಾನಿರ್ದೇಶಕರು, ರಾಜ್ಯ ವಿಪತ್ತು ಸ್ಪಂದನಾ ಪಡೆ ಬೆಂಗಳೂರು" ಇವರಿಗೆ ಮಂಜೂರಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನ ಬಿದರಗಡ್ಡಿ ಗ್ರಾಮದ ರಿ.ಸ.ನಂ. 9,10,12, ಮತ್ತು 13ರ ಒಟ್ಟು ಕ್ಷೇತ್ರ 64ಎಕರೆ 14ಗುಂಟೆ ಪೈಕಿ 49ಎಕರೆ 35 ಗುಂಟೆ "ಬ" ಖರಾಬ್ ಗಾಯರಾಣ ಜಮೀನನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ. 68(5)ರಡಿ ಸಾರ್ವಜನಿಕ ಹಕ್ಕಿನಿಂದ ವಿಹಿತಗೊಳಿಸಲು ನಿಯಮಾನುಸಾರ ಕ್ರಮವಹಿಸಿ, ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 97(4)ರಡಿ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ, " ರಾಜ್ಯ ವಿಪತ್ತು ಸ್ಪಂದನಾ ಪಡೆ ಬೆಳಗಾವಿ "ಸಿ" ಕಂಪನಿಗೆ, ಪೋಲೀಸ್ ಮಹಾ ನಿರ್ದೇಶಕರು, ಹಾಗೂ ಮಹಾ ನಿರ್ದೇಶಕರು, ರಾಜ್ಯ ವಿಪತ್ತು ಸ್ಪಂದನಾ ಪಡೆ ಬೆಂಗಳೂರು" ಇವರಿಗೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969 ರ ನಿಯಮ 22ಎ(3)(i) ರನ್ವಯ ಉಚಿತವಾಗಿ ಮಂಜೂರು ಮಾಡಲು ಓದಿತು(5)ರಡಿ ಸರ್ಕಾರದಿಂದ ಪೂರ್ವಾನುಮೋದನೆಯನ್ನು ನೀಡಲಾಗಿದೆ.

ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 68(1) ರಡಿ ದಿನಾಂಕ:09-02-2017 ರಂದು ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಿ, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು. ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 68(5)ರಡಿ ಸಾರ್ವಜನಿಕ ಹಕ್ಕಿನಿಂದ ವಿಹಿತಗೊಳಿಸಿ ಸರ್ಕಾರದಿಂದ ಆದೇಶಿಸಲಾಗಿದೆ. ಕಾರಣ ಈ ಕೆಳಗಿನಂತೆ ಆದೇಶಿಸಿದೆ.

**:ಆದೇಶ:**

ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನ ಬಿದರಗಡ್ಡಿ ಗ್ರಾಮದ ರಿ.ಸ.ನಂ. 9,10,12, ಮತ್ತು 13ರ ಒಟ್ಟು ಕ್ಷೇತ್ರ 64ಎಕರೆ 14ಗುಂಟೆ ಪೈಕಿ 49ಎಕರೆ 35 ಗುಂಟೆ "ಬ" ಖರಾಬ್ ಗಾಯರಾಣ ಜಮೀನನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 68(5)ರಡಿ ಸಾರ್ವಜನಿಕ ಹಕ್ಕಿನಿಂದ ವಿಹಿತಗೊಳಿಸಿ, ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 97(4)ರಡಿ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969 ರ ನಿಯಮ 22ಎ(3)(i) ರನ್ವಯ " ಪೋಲೀಸ್ ಮಹಾ ನಿರ್ದೇಶಕರು, ಹಾಗೂ ಮಹಾ ನಿರ್ದೇಶಕರು, ರಾಜ್ಯ ವಿಪತ್ತು ಸ್ಪಂದನಾ ಪಡೆ ಬೆಂಗಳೂರು" (ರಾಜ್ಯ ವಿಪತ್ತು ಸ್ಪಂದನಾ ಪಡೆ ಬೆಳಗಾವಿ "ಸಿ" ಕಂಪನಿಗೆ) ಇವರಿಗೆ ಉಚಿತವಾಗಿ ಈ ಕೆಳಕಾಣಿಸಿದ ಶರತ್ತಿಗೊಳಪಟ್ಟು ಮಂಜೂರು ಮಾಡಿ ಆದೇಶಿಸಿದೆ.

**ಪರಿಶಿಷ್ಟ**

| ಜಿಲ್ಲೆ : ಬೆಳಗಾವಿ | ತಾಲೂಕು : ಬೈಲಹೊಂಗಲ | ಹೋಬಳಿ:ಬೈಲಹೊಂಗಲ | ಗ್ರಾಮ : ಬಿದರಗಡ್ಡಿ |
|---|---|---|---|

| ಕ್ರಸ | ಸರ್ವೆ ನಂಬರ | ಒಟ್ಟು ಕ್ಷೇತ್ರ ಎ-ಗುಂ | ಕೋರಿಕೆ ಕ್ಷೇತ್ರ ಎ-ಗುಂ | ಮಂಜೂರಿಗೆ ಬೇಡಿದ ಜಮೀನಿನ ಚಕಬಂದಿ | | | |
|---|---|---|---|---|---|---|---|
| | | | | ಪೂರ್ವಕ್ಕೆ | ಪಶ್ಚಿಮಕ್ಕೆ | ಉತ್ತರಕ್ಕೆ | ದಕ್ಷಿಣಕ್ಕೆ |
| 1 | 2 | 3 | 4 | 5a | 5 b | 5 c | 5 d |
| 01 | 09 | 17-03 | 11-34 | ರಿ.ಸ.ನಂ. 9ರ ಉಳಿದ ಜಮೀನು | ರಿ.ಸ.ನಂ.10 | ರಿ.ಸ.ನಂ.13 | ರಿ.ಸ.ನಂ. 138 |
| 02 | 10 | 18-26 | 18-21 | ರಿ.ಸ.ನಂ.9 | ರಿ.ಸ.ನಂ.11 | ರಿ.ಸ.ನಂ.12 | ರಿ.ಸ.ನಂ. 134,135 |

..3

Scanned with CamScanner

| | | | | | | | |
|---|---|---|---|---|---|---|---|
| 03 | 12 | 12–17 | 12–07 | ಕಾಲುದಾರಿ/ ರಿ.ಸ.ನಂ.13 | ಕಾಲುದಾರಿ/ ರಿ.ಸ.ನಂ.11 | ಕಾಲುದಾರಿ/ ಸಿದ್ದಸಮುದ್ರ | ರಿ.ಸ.ನಂ.10 |
| 04 | 13 | 16–08 | 07–13 | ರಿ.ಸ.ನಂ.13ರ ಉಳಿದ ಬಾಗ | ರಿ.ಸ.ನಂ. 12 | ಸಿದ್ದಸಮುದ್ರ ಸೀಮೆ | ರಿ.ಸ.ನಂ.9 |
| ಒಟ್ಟು ಕ್ಷೇತ್ರ | | | 49–35 | | | | |

**ಷರತ್ತುಗಳು**

1. ಪ್ರಸ್ತಾಪಿತ ಜಮೀನನ್ನು ಯಾವ ಉದ್ದೇಶಕ್ಕಾಗಿ ಮಂಜೂರಿಸಲಾಗಿದೆಯೋ ಅದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದು.
2. ತಹಶೀಲ್ದಾರ, ಬೈಲಹೊಂಗಲ ಇವರಿಂದ ಜಮೀನಿನ ಕಬ್ಜಾ ಪಡೆದು 3 ತಿಂಗಳ ಒಳಗಾಗಿ ಮಂಜೂರಾದ ನಿವೇಶನದ ಸುತ್ತಲೂ ಆವರಣ ಗೋಡೆಯನ್ನು ಭೂ ಕೋರಿಕೆ ಸಂಸ್ಥೆ/ ಇಲಾಖೆಯವರು ತಮ್ಮ ವೆಚ್ಚದಲ್ಲಿ ನಿರ್ಮಿಸಿಕೊಳ್ಳತಕ್ಕದ್ದು ಮತ್ತು ತನ್ಮೂಲಕ ಅತಿಕ್ರಮಣವಾಗದಂತೆ ಕ್ರಮ ಕೈಗೊಳ್ಳತಕ್ಕದ್ದು.
3. ಮಂಜೂರಾತಿ ಆದೇಶ ಹೊರಡಿಸಿದ 120 ದಿನಗಳ ಒಳಗಾಗಿ ಕಮ್–ಜಾಸ್ತ ಪತ್ರಿಕೆಯನ್ನು ಕಾರ್ಯಾಚರಣೆಗೊಳಿಸಿಕೊಳ್ಳುವುದು.
4. ಮಂಜೂರಾದ ಜಮೀನಿನ ಗಡಿ ರೇಖೆಯ ಸುತ್ತಲಿನ ಪದ್ದಿಯಲ್ಲಿ ನೆರಳು ಮತ್ತು ಫಲ ನೀಡುವ ವೃಕ್ಷಗಳನ್ನು ನೆಟ್ಟು ಪೋಷಿಸತಕ್ಕದ್ದು.
5. ಪ್ರಸ್ತಾಪಿತ ಜಮೀನು ಮಂಜೂರಾದ ಉದ್ದೇಶಕ್ಕೆ ಅಗತ್ಯವಿಲ್ಲವೆಂದು ಕಂಡುಬಂದಲ್ಲಿ, ಸದರಿ ಜಮೀನನ್ನು ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸತಕ್ಕದ್ದೇ ಹೊರತು ಅದನ್ನು ಬೇರಾವುದೇ ವಿಧಾನದಲ್ಲಿ ಹಸ್ತಾಂತರ ಮಾಡುವ ಅಧಿಕಾರವು ಭೂ ಮಂಜೂರಾತಿದಾರ ಸಂಸ್ಥೆ/ಇಲಾಖೆಗೆ ಇರುವುದಿಲ್ಲ.
6. ಪ್ರಸ್ತಾಪಿತ ಜಮೀನನ್ನು ಅಡವು ಇಟ್ಟು ಸಾಲ ಪಡೆಯುವುದಾಗಲೀ ಅಥವಾ ಇನ್ನಾವುದೇ ವಿಧಾನದ ಮೂಲಕ ಜಮೀನಿನ ಮೇಲೆ ಸಾಲ ಪಡೆಯತಕ್ಕದ್ದಲ್ಲ.
7. ಜಮೀನಿನ ಕಬ್ಜಾ ಪಡೆದ ದಿನಾಂಕದಿಂದ ಎರಡು ವರ್ಷಗಳ ಅವಧಿಯ ಒಳಗಾಗಿ ಮಂಜೂರಾದ ಉದ್ದೇಶಕ್ಕಾಗಿ ಜಮೀನನ್ನು ಉಪಯೋಗಿಸತಕ್ಕದ್ದು ಮತ್ತು ಆ ಬಗ್ಗೆ ಪಾಲನಾ ವರದಿಯನ್ನು ಜಿಲ್ಲಾಧಿಕಾರಿಗಳರಿಗೆ ಸಲ್ಲಿಸತಕ್ಕದ್ದು.
8. ಜಮೀನಿನಲ್ಲಿ ಯಾವುದೇ ಅಭಿವೃದ್ಧಿ ಕೈಕೊಳ್ಳುವ ಮೊದಲು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಸಕ್ಷಮ ಪ್ರಾಧಿಕಾರದ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದುಕೊಳ್ಳುವುದು.
9. ಕಟ್ಟಡ ನಿರ್ಮಾಣ ಅಥವಾ ಇನ್ನಿತರ ನಿರ್ಮಾಣ ಕಾರ್ಯ ಕೈಗೊಳ್ಳುವ ಮೊದಲು ಲೋಕೋಪಯೋಗಿ ಇಲಾಖೆಯ ಸಕ್ಷಮ ಪ್ರಾಧಿಕಾರದಿಂದ, ಸದರೀ ಜಮೀನು ಅಂತಹ ನಿರ್ಮಾಣ ಕಾರ್ಯಗಳಿಗೆ ಯೋಗ್ಯವಿದ್ದ ಬಗ್ಗೆ ತಪ್ಪದೇ ಪ್ರಮಾಣ ಪತ್ರವನ್ನು ಪಡೆದುಕೊಳ್ಳತಕ್ಕದ್ದು.
10. ಸ್ಥಳೀಯ ಸಂಸ್ಥೆಯ (ಗ್ರಾಮ ಪಂಚಾಯತ/ಪಟ್ಟಣ ಪಂಚಾಯತ/ಪುರಸಭೆ/ನಗರಸಭೆ/ ನಗರಪಾಲಿಕೆ) ನಿಯಮಾನುಸಾರ ಕರಗಳನ್ನು ನಿಯಮಿತವಾಗಿ ತಪ್ಪದೇ ತುಂಬತಕ್ಕದ್ದು.
11. ಸದರಿ ಜಮೀನ ಕುರಿತು ಯಾವುದೇ ನ್ಯಾಯಾಲಯದ ಪ್ರಕರಣ ಬಾಕಿ ಇದ್ದಲ್ಲಿ ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.

..4

Scanned with CamScanner

12. ಮೇಲಿನ ಎಲ್ಲ ಶರ್ತುಗಳ ಪಾಲನೆಗೆ ಬದ್ಧನಿರುವ ಬಗ್ಗೆ ಭೂ ಕೋರಿಕೆ ಸಂಸ್ಥೆ/ ಇಲಾಖೆಯವರು ಮಂಜೂರಾತಿ ಆದೇಶ ಹೊರಡಿಸಿದ 30 ದಿನಗಳ ಒಳಗಾಗಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969 ರ ನಿಯಮ 28 ರಡಿ ನಿರ್ದೇಶಿಸಿದಂತೆ, ತಹಶೀಲ್ದಾರ ಕಿತ್ತೂರ ಇವರಿಗೆ ನಮೂನೆ 6 ರಲ್ಲಿ ಒಪ್ಪಿಗೆ ಪತ್ರವನ್ನು ಬರೆದುಕೊಡತಕ್ಕದ್ದು.

13. ಮೇಲಿನ ಯಾವುದೇ ಶರ್ತುಗಳ ಉಲ್ಲಂಘನೆ ಮಾಡಿದ್ದಲ್ಲಿ, ಭೂ ಮಂಜೂರಾತಿ ಸಂಸ್ಥೆ/ ಇಲಾಖೆಗೆ ಯಾವುದೇ ನೋಟೀಸು ನೀಡದೇ, ಜಮೀನಿನ ಎಲ್ಲ ಆಸ್ತಿಗಳು ಸೇರಿದಂತೆ, ಭೂ ಮಂಜೂರಾತಿ ಸಂಸ್ಥೆ/ಇಲಾಖೆಗೆ ಯಾವುದೇ ಪರಿಹಾರವನ್ನು ನೀಡದೆಯೇ ಋಣಭಾರರಾಹಿತ್ಯವಾಗಿ, ಸದರಿ ಜಮೀನನ್ನು ರಾಜ್ಯ ಸರ್ಕಾರದ ವಶಕ್ಕೆ ಪಡೆದುಕೊಳ್ಳಲಾಗುವುದು.

Patil
(ನಿತೇಶ್ ಕೆ. ಪಾಟೀಲ)
ಜಿಲ್ಲಾಧಿಕಾರಿಗಳು ಬೆಳಗಾವಿ.

<u>ಪ್ರತಿಯನ್ನು ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.</u>

1. ಮಾನ್ಯ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ಬೆಳಗಾವಿ.
2. ಪೋಲೀಸ್ ಮಹಾ ನಿರ್ದೇಶಕರು, ಹಾಗೂ ಮಹಾ ನಿರ್ದೇಶಕರು, ರಾಜ್ಯ ವಿಪತ್ತು ಸ್ಪಂದನಾ ಪಡೆ ಬೆಂಗಳೂರು.
3. ಉಪವಿಭಾಗಾಧಿಕಾರಿಗಳು, ಬೈಲಹೊಂಗಲ.
4. ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಭೂ ದಾಖಲೆಗಳ ಉಪ ನಿರ್ದೇಶಕರು, ಬೆಳಗಾವಿ.
5. ತಹಶೀಲ್ದಾರ ಬೈಲಹೊಂಗಲ.
6. ಕಚೇರಿಯ ನ್ಯಾಯಾಲಯ ಶಾಖೆಗೆ ಪಹಣಿ ಪತ್ರಿಕೆಯಲ್ಲಿ ದಾಖಲಿಸುವ ಕುರಿತು ಅಗತ್ಯ ಕ್ರಮಕ್ಕಾಗಿ.

4/8

ಅಪರ ಜಿಲ್ಲಾಧಿಕಾರಿಗಳು ಬೆಳಗಾವಿ.

Scanned with CamScanner